

ವಜ್ರದಾಭರಣಕ್ಕೆ ಮದುಮಗಳು ಸೇರಿದಂತೆ ಎಲ್ಲ ಮಹಿಳೆಯರು ಮನಸೋತಿದ್ದಾರೆ. ಹಗುರವಾದ ಆಕರ್ಷಕ ವಿನ್ಯಾಸದ ವಜ್ರದ ಒಡವೆಗಳು ಈಗ ದುಬಾರಿ ಆಗದೇ ಇರುವುದರಿಂದ ಹಾಗೂ ಇದರಲ್ಲಿ ಹಲವು ವಿನ್ಯಾಸದ ಆಭರಣ ಲಭ್ಯ ಇರುವುದರಿಂದ ಇದೀಗ ಡೈಮಂಡ್‌ಗೆ ಬಹಳ ಡಿಮ್ಯಾಂಡ್!

■ ಯು. ಅನಂತ್

# ಡೈಮಂಡ್‌ಗೆ ಡಿಮ್ಯಾಂಡು

ವಜ್ರದೊಡವೆ ಎಂದರೆ ಮಹಿಳೆಯರಿಗೆ ಅದೇನೋ ಮೋಹಕತೆ, ಇನ್ನಿಲ್ಲದಷ್ಟು ಸೆಳೆತ. ತೀರಾ ದುಬಾರಿ ಎನಿಸಿದ್ದ ವಜ್ರ ಇದೀಗ ಮಧ್ಯಮವರ್ಗದವರ ಆಸೆಯನ್ನೂ ಪೂರೈಸುತ್ತಿದೆ. ಬೆಲೆಯಲ್ಲಿ ಎಷ್ಟು ಬಳಸಿದರೂ ಅಂದಗೆಡದ, ಹಳತಾಗದೆ ಇರುವುದು ಇದರ ಪ್ಲಸ್ ಪಾಯಿಂಟ್.

ಮದುಮಗಳ ಕತ್ತಿನ ನೆಕ್ಲೇಸ್, ಮೂಗಿನ ನತ್ತು, ಕಿವಿಯ ಓಲೆ, ಜುಮುಕಿ ಎಲ್ಲವೂ ಫಳಫಳ.. ಭರ್ಜರಿ ರೇಷ್ಮೆ ಸೀರೆಯುಟ್ಟ ಮದುಮಗಳ ತಾಯಿಯ ಕುತ್ತಿಗೆಯಲ್ಲಿ ಹೊಳೆಹೊಳೆಯುವ ವಜ್ರದ ಹಾರ, ಮದುಮಗಳ ಬೆರಳಲ್ಲಿ ವಜ್ರದ ಹರಳಿನುಂಗುರ, ಬಂದ ನೆಂಟರಿಷ್ಟರ ಕೊರಳು, ಬೆರಳುಗಳಲ್ಲಿಯೂ ವಜ್ರದೊಡವೆಯೇ ಮಿಂಚಿಂಗ್...!

ಹೀಗೆ ಈಗಿನ ಮದುವೆ ಮನೆಯಲ್ಲಿ ಆಭರಣಗಳ ಮಟ್ಟಿಗೆ ವಜ್ರಕ್ಕೇ ಹೆಚ್ಚಿನ ಪ್ರಾಶಸ್ತ್ಯ. ಇದಕ್ಕೆ ಪ್ರಮುಖ ಕಾರಣ ವಜ್ರದಲ್ಲಿ ಹಗುರವಾದ, ಹೊಸ ಹೊಸ ವಿನ್ಯಾಸದ ಒಡವೆಗಳು ತೀರಾ ದುಬಾರಿಯಾಗದೇ ಇರುವುದೇ ಆಗಿದೆ. ಅಲ್ಲದೆ ವಜ್ರದ ಉಂಗುರ, ಹಾರ, ಬ್ರೇಸ್ಲೆಟ್ ಧರಿಸುವುದು ಪ್ರತಿಷ್ಠೆಯ ಸಂಕೇತವೂ ಆಗಿದೆ.

ಹಾಗೆ ನೋಡಿದರೆ ಮದುವೆಯಲ್ಲಿ ವಜ್ರದ ಒಡವೆ ಧರಿಸುವ ಪದ್ಧತಿ ಇಂದು ನಿನ್ನೆಯದಲ್ಲ. ಇತಿಹಾಸವನ್ನು ಕೆದಕಿದರೆ ಬ್ರಿಟನ್ ರಾಜಕುಮಾರಿ ಎರಡನೆ ಎಲಿಜಬೆತ್ ತನ್ನ ಮದುವೆಯ ನಿಶ್ಚಿತಾರ್ಥಕ್ಕೆ ಪ್ರಿನ್ಸ್ ಫಿಲಿಪ್‌ನಿಂದ 'ಸ್ಕ್ವೇರ್‌ಕಟ್ ಡೈಮಂಡ್' ಉಂಗುರವನ್ನು ಹಾಕಿಸಿಕೊಂಡದ್ದಷ್ಟೇ ಅಲ್ಲದೆ ವಜ್ರದ ಬ್ರೇಸ್‌ಲೆಟ್ ಅನ್ನು ಮದುವೆಯ ಉಡುಗೊರೆಯಾಗಿ ಪಡೆದಿರುವ ವಿಚಾರ ವಜ್ರದೊಡವೆಯ ಮಹತ್ವವನ್ನು ತಿಳಿಸುತ್ತದೆ.

ರಾಜ ದರ್ಬಾರಿನ ಇನ್ನೊಂದು ಉದಾಹರಣೆ ಗಮನಿಸಿ. ಪ್ರಿನ್ಸೆಸ್ ಡಯಾನ ರಾಜಕುಮಾರ ವೇಲ್ಸ್‌ನ ಬಳಿಯಿಂದ 14 ಸುತ್ತಿನ ವಜ್ರದ ಉಂಗುರವನ್ನು ಉಡುಗೊರೆಯಾಗಿ ಸ್ವೀಕರಿಸಿದಳು ಎನ್ನುತ್ತದೆ ಇತಿಹಾಸ.

ಅಂದು ರಾಜ ಮನೆತನ ಹಾಗೂ ಅತ್ಯಂತ ಶ್ರೀಮಂತ ವರ್ಗದವರಿಗೆ ಮಾತ್ರವೇ ಸೀಮಿತವಾಗಿದ್ದ ದುಬಾರಿ ವಜ್ರ, ಇಂದು ಮಧ್ಯಮ ವರ್ಗದ ಮಹಿಳೆಯರನ್ನೂ ಮನವನ್ನೂ ತಣಿಸುತ್ತಿದೆ. ವಜ್ರದ ಆಭರಣ ಒಂದು ಫ್ಯಾಷನ್ ಟ್ರೆಂಡ್ ಆಗಿ

ಉತ್ತರ ಭಾರತೀಯರಿಗಿಂತ ಹೆಚ್ಚು ದಕ್ಷಿಣ ಭಾರತೀಯರಿಂದ ವಜ್ರದ ಆಭರಣಗಳಿಗೆ ಬೇಡಿಕೆ ಹೆಚ್ಚು. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಮಹಿಳೆಯರು ವಜ್ರದ ಆಭರಣಗಳನ್ನು ಖರೀದಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ ಎನ್ನುತ್ತದೆ ಇತ್ತೀಚೆಗೆ ನಡೆದ ಗ್ರಾಹಕ ಸಮೀಕ್ಷೆ.